| ಬಾಹ್ಯಾಕಾಶ ಯಾತ್ರೆ ಮುಗಿಸಿರುವ ಖಾಸಗಿ ಯಾತ್ರಿಗಳ ವಿವರ | | | |
|---|---|---|---|
| ಅಂತರಿಕ್ಷ ಪ್ರವಾಸಿಗರು | ದೇಶ | ವರ್ಷ | ಪ್ರವಾಸಿ ತಾಣ |
| ಡೆನ್ನಿಸ್ ಟಿಟೋ | ಅಮೆರಿಕ | 2001 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ಮಾರ್ಕ್ ಷಟಲ್ ವತ್ | ದಕ್ಷಿಣ ಆಫ್ರಿಕಾ | 2002 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ಗ್ರೆಗೋರಿ ಓಸೆನ್ | ಅಮೆರಿಕ | 2005 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ಅನೌಶಿ ಅನ್ಸಾರಿ | ಇರಾನ್ | 2006 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ಚಾರ್ಲ್ಸ್ ಸಿಮೊನಿ | ಅಮೆರಿಕ | 2007 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ರಿಚರ್ಡ್ ಗ್ಯಾರಿಯೋಟ್ | ಅಮೆರಿಕ | 2008 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ಗಯ್ ಲಾಲಿಬರ್ | ಕೆನಡಾ | 2009 | ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ |
| ರಿಚರ್ಡ್ ಬ್ರಾನ್ಸನ್ | ಅಮೆರಿಕ | 2021 | ಭೂಮಿಯ ಕಕ್ಷೆ |
| ಯುಸಾಕು ಮೆಯಜೋವಾ ತಂಡ | ವಿವಿಧ ದೇಶಗಳ ಆಸಕ್ತ ಪ್ರಯಾಣಿಕರು | | ಚಂದ್ರ |

ಎಂಟು ಜನ ಕಲಾವಿದರನ್ನು ಚಂದ್ರನ ಮೇಲೆ ಕರೆದೊಯ್ಯಲು ಬೇಕಾಗುವ ಖರ್ಚಿನ ಮೊತ್ತವನ್ನು ಮೆಯಜೋವಾ ಅವರು ಈಗಾಗಲೇ 'ಸ್ಪೇಸ್ ಎಕ್ಸ್'ಗೆ ನೀಡಿದ್ದು, ಎಂಟು ಜನರ ಜಾಗವನ್ನು ಕಾಯ್ದಿರಿಸಿದ್ದಾರೆ. ಕಲಾವಿದರ ಆಯ್ಕೆಯು ಕೂಡ ಬಿರುಸಿನಿಂದ ನಡೆದಿದ್ದು, ಆ ಯೋಜನೆಗೆ 'ಡಿಯರ್ ಮೂನ್' ಎಂದು ಹೆಸರಿಸಲಾಗಿದೆ. ಆ ಯೋಜನೆ ಯಶಸ್ವಿಯಾದದ್ದೇ ಆದರೆ ಭೂಮಿಯಿಂದಾಚೆಗೂ ಯಾತ್ರೆಗೆ ಹೋಗುವ ಅವಕಾಶಗಳು ಸದ್ದಿಲ್ಲದೆ ತೆರೆದಂತಾಗುತ್ತದೆ.

### ರಂಗೇರುತ್ತಿರುವ ರೇಸ್

ಭೂಮಿಯ ಮೇಲೆ ಇರುವಂತೆ ನಾನಾ ಬಗೆಯ ಪೈಪೋಟಿಗಳು ಇಂದು ಬಾಹ್ಯಾಕಾಶಕ್ಕೂ ವಿಸ್ತರಿಸಿವೆ. ಈಗಾಗಲೇ ಚಂದ್ರ, ಮಂಗಳನ ಮೇಲೆ ತಮ್ಮ ಹಿಡಿತ ಸಾಧಿಸಿಕೊಳ್ಳಲೆಂದು ಅಮೆರಿಕ, ರಷ್ಯಾ, ಚೀನಾ, ಸೇರಿದಂತೆ ವಿವಿಧ ರಾಷ್ಟ್ರಗಳು ಸಕಲ ಪ್ರಯತ್ನಗಳನ್ನು ಮಾಡುತ್ತಲೇ ಇವೆ. ಈ ಪೈಪೋಟಿ ಎಷ್ಟು ಬಿರುಸಿನಿಂದ ಕೂಡಿದೆ ಎಂದರೆ, ಬಾಹ್ಯಾಕಾಶದಲ್ಲಿ ನಿರ್ಮಿಸಲಾಗಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ತಂಗಲು ಚೀನಿಯರಿಗೆ ಅಮೆರಿಕ ಅವಕಾಶ ನೀಡದ ಕಾರಣ, ಚೈನಾ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವೊಂದನ್ನು ನಿರ್ಮಿಸಿಕೊಂಡಿದೆ. ಹೀಗೆ ರಾಜತಾಂತ್ರಿಕ ಭಿನ್ನಮತಗಳೂ ಕೂಡ ಬಾಹ್ಯಾಕಾಶದೆತ್ತರಕ್ಕೂ ಹಬ್ಬಿವೆ.

ಈ ನಡುವೆ ಸರ್ಕಾರಿ ಬಾಹ್ಯಾಕಾಶ ಸಂಸ್ಥೆಗಳ ಮುಸುಕಿನ ಗುದ್ದಾಟದ ನಡುವೆ ಖಾಸಗಿ ಕಂಪನಿಗಳು ನುಗ್ಗಿರುವುದು ಆಯಾ ರಾಷ್ಟ್ರಗಳಿಗೆ ಹೆಚ್ಚಿನ ಬಲ ಬಂದಂತಾಗಿದೆ. ಅಮೆರಿಕದ ಖಾಸಗಿ ಸಂಸ್ಥೆ 'ಸ್ಪೇಸ್ ಎಕ್ಸ್', 'ವರ್ಜಿನ್ ಗ್ಯಾಲಕ್ಟಿಕಾ' ಸಂಸ್ಥೆ ಬಾಹ್ಯಾಕಾಶ ಪ್ರವಾಸಕ್ಕೆ ತೆರಳುವ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿವೆ.

### ಬಿಲಿಯನ್ ಡಾಲರ್ ಮಾರುಕಟ್ಟೆ

'ಸ್ಪೇಸ್ ಟೂರಿಸಂ' ಎನ್ನುವುದೀಗ ಖಾಸಗಿ ಕಂಪನಿಗಳ ಪೈಪೋಟಿಯಿಂದಾಗಿ ದುಬಾರಿ ಮಾರುಕಟ್ಟೆಯಾಗಿ ಮಾರ್ಪಾಡಾಗಿದೆ. ಸಾರಿಗೆ ಸಂಸ್ಥೆಗಳ ನಡುವೆ ನಾವು ಕಾಣುವ ದಿನನಿತ್ಯದ ಪೈಪೋಟಿಯನ್ನು ಮುಂದಿನ ದಿನಗಳಲ್ಲಿ ಬಾಹ್ಯಾಕಾಶ ಯಾನದಲ್ಲೂ ಕಂಡರೆ ಆಶ್ಚರ್ಯವೇನಿಲ್ಲ. ಅಂದಹಾಗೆ, ಈ ಕ್ಷೇತ್ರದಲ್ಲಿ ಪೈಪೋಟಿಯಿರುವುದು ಶತಕೋಟಿ ಕುಬೇರರರ ನಡುವೆ; ವಿಶ್ವದ ಅತಿ ದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಮುಂಚೂಣಿಯಲ್ಲಿರುವ ಇಲಾನ್ ಮಸ್ಕ್, ರಿಚರ್ಡ್ ಬ್ರಾನ್ಸನ್, ಜೆಫ್ ಬಿಜೋಸ್ ಅವರಂತಹ ಬಿಲಿಯನೇರ್‌ಗಳ ನಡುವೆ. ಒಂದು ಅಂದಾಜಿನಂತೆ, ಬಾಹ್ಯಾಕಾಶ ಪ್ರವಾಸೋದ್ಯಮವು ಸುಮಾರು 3 ಬಿಲಿಯನ್ ಡಾಲರ್‌ಗಳ ಮಾರುಕಟ್ಟೆ ಎಂದು ವಿಶ್ಲೇಷಿಸಲಾಗಿದೆ.

2004ರಲ್ಲೇ ಬಾಹ್ಯಾಕಾಶ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಕಾಯ್ದೆ ಕಾನೂನುಗಳನ್ನು ಅಮೆರಿಕ ಜಾರಿಗೊಳಿಸಿದೆ. ಖಾಸಗಿ ಸಂಸ್ಥೆಗಳು ತಯಾರಿಸುವ ಉಡ್ಡಯನ ನೌಕೆಗಳ ಕಾರ್ಯಕ್ಷಮತೆ, ಉಡಾವಣೆ, ಸಾರ್ವಜನಿಕರ ಸುರಕ್ಷತೆಗಳನ್ನು ಖುದ್ದು ಪರಿಶೀಲಿಸಲೆಂದು, ಆಡಳಿತಾತ್ಮಕ ಸಮಿತಿಯೊಂದನ್ನು ಅನುಷ್ಠಾನಗೊಳಿಸಿದೆ. ಆದರೆ ಪ್ರಯಾಣಿಕರ ಸುರಕ್ಷತೆಯ ಕುರಿತು ಕಟ್ಟುನಿಟ್ಟಿನ ಕಾನೂನುಗಳನ್ನು ಮಾತ್ರ ಇನ್ನೂ ಜಾರಿಗೆ ತಂದಿಲ್ಲ.

### ಬಾಹ್ಯಾಕಾಶದ ರೇಸ್‌ನಲ್ಲಿ ಭಾರತ

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಅನೇಕ ಸಾಹಸಗಳನ್ನು ಈಗಾಗಲೇ ಕೈಗೊಂಡು ಯಶಸ್ವಿಯಾಗಿದೆ. ಆದರೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಆರ್ಥಿಕತೆಯನ್ನು ವೃದ್ಧಿಗೊಳಿಸಿಕೊಳ್ಳುವ ಉದ್ದೇಶದಿಂದ ವಿವಿಧ ದೇಶಗಳಲ್ಲಿ ಶುರುವಾಗಿರುವ ಬಾಹ್ಯಾಕಾಶ ಪ್ರವಾಸೋದ್ಯಮದ ಜಗತ್ತಿಗೆ ಭಾರತ ಇನ್ನಷ್ಟೇ ಸಜ್ಜಾಗಬೇಕಿದೆ.



| ಬಾಹ್ಯಾಕಾಶ ಪ್ರವಾಸೋದ್ಯಮದ ಪೈಪೋಟಿಯಲ್ಲಿರುವ ಕಂಪನಿಗಳು | | |
|---|---|---|
| ಸಂಸ್ಥೆ | ದೇಶ | ಯಾತ್ರಾ ನೌಕೆ |
| ಸ್ಪೇಸ್ ಎಕ್ಸ್ | ಅಮೆರಿಕ | ಫಾಲ್ಕನ್ |
| ಸ್ಪೇಸ್ ಅಡ್ವೆಂಚರ್ ಲಿಮಿಟೆಡ್ | ಅಮೆರಿಕ | |
| ಮಿರ್ ಕಾರ್ಪ್ | ರಷ್ಯಾ | ಸೋಯೆಜ್ |
| ಆರ್ಬ್ ಸ್ಪೇಸ್ | ಆಸ್ಟ್ರೀಯಾ | |
| ವರ್ಜಿನ್ ಗ್ಯಾಲಕ್ಟಿಕಾ | ಇಂಗ್ಲೆಂಡ್ | ಸ್ಪೇಸ್ ಶಿಪ್ |
| ಬ್ಲೂ ಒರಿಜಿನ್ | ಅಮೆರಿಕ | ನ್ಯೂ ಶೆಪರ್ಡ್ ರಾಕೆಟ್ |

